# ಎಟಿಎಂ ಕಣ್ಗಾವಲಿಗೆ 'ಆ್ಯಕ್ಟಿವ್ ಡಿಟೆರೆನ್ಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಟಿಎಂ ಘಟಕಗಳಲ್ಲಿ ನಡೆಯಬಹುದಾದ ಅಪರಾಧ ಕೃತ್ಯಗಳ ತಡೆಗೆ ಸೆಕ್ಯುರೆನ್ಸ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು 'ಆ್ಯಕ್ಟಿವ್ ಡಿಟೆರೆನ್ಸ್' ಎಂಬ ಅತ್ಯಾಧುನಿಕ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದ್ದು, ಈಗಾಗಲೇ ನಗರದ 400 ಎಟಿಎಂ ಘಟಕಗಳು ಈ ತಂತ್ರಜ್ಞಾನದಡಿ ಸೇವೆ ಒದಗಿಸುತ್ತಿವೆ.

ನಗರದಲ್ಲಿ ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಸುನೀಲ್ ಆರ್. ಉಡುಪ ಈ ಹೊಸ ತಂತ್ರಜ್ಞಾನದ ಬಗ್ಗೆ ಮಾಹಿತಿ ನೀಡಿದರು.

'ದೇಶದ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆ ಉಂಟು ಮಾಡಿದ ಎಟಿಎಂ ವವಸ್ಥೆ ಇದೀಗ ತಪ್ಪು ಕಾರಣಗಳಿಂದಾಗಿ ನಿತ್ಯ ಸುದ್ದಿಯಾಗುತ್ತಿದೆ. ಎಟಿಎಂ ಘಟಕದಲ್ಲಿ ಗ್ರಾಹಕರು ಮತ್ತು ಭದ್ರತಾ ಸಿಬ್ಬಂದಿಯ ಮೇಲೆ ಹಲ್ಲೆ ನಡೆಸುತ್ತಿರುವ ದುಷ್ಕರ್ಮಿಗಳು, ಎಟಿಎಂ ಯಂತ್ರವನ್ನೇ ಕದ್ದೊಯ್ಯುತ್ತಿದ್ದಾರೆ. ಹೀಗಾಗಿ ಎಟಿಎಂ ಘಟಕಗಳಲ್ಲಿರುವ ಸದ್ಯದ ಭದ್ರತಾ ವ್ಯವಸ್ಥೆಯಿಂದ ಕಿಡಿಗೇಡಿಗಳ ಕೃತ್ಯವನ್ನು ನಿಯಂತ್ರಿಸುವುದು ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಸಂಸ್ಥೆ ದೇಶಕ್ಕೆ ಪರಿಚಯಿಸಿರುವ 'ಆ್ಯಕ್ಟಿವ್ ಡಿಟೆರೆನ್ಸ್' ಸಾಧನ ಹೆಚ್ಚು ಪರಿಣಾಮಕಾರಿಯಾಗಲಿದೆ' ಎಂದು ಭರವಸೆ ನೀಡಿದರು.

'ಈ ನೂತನ ಭದ್ರತಾ ವ್ಯವಸ್ಥೆಯನ್ವಯ ಎಟಿಎಂ ಘಟಕದಲ್ಲಿ ಕ್ಯಾಮೆರಾ, ಮೈಕ್ರೋಫೋನ್, ಸ್ಪೀಕರ್ ಅಳವಡಿಸಲಾಗುತ್ತದೆ. ಈ ಉಪಕರಣಗಳು ಮುಂಬೈನಲ್ಲಿರುವ ಸಂಸ್ಥೆಯ ಕೇಂದ್ರ ಕಚೇರಿ ಜತೆ ಸಂಪರ್ಕ ಹೊಂದಿರುತ್ತವೆ. ಯಾರೇ ಘಟಕ ಪ್ರವೇಶಿಸಿದರೂ ಅವರ ಚಲನವಲನಗಳು ಕಚೇರಿ ದೃಶ್ಯಫಲಕದ ಮೇಲೆ ಗೋಚರವಾಗುತ್ತದೆ. ಅವರು ಘಟಕದೊಳಗೆ ಅನುಮಾನಾಸ್ಪದ ರೀತಿಯಲ್ಲಿ ವರ್ತಿಸುತ್ತಿದ್ದರೆ ಕಚೇರಿ ಸಿಬ್ಬಂದಿ ಎಚ್ಚರಿಕೆ ನೀಡುತ್ತಾರೆ. ಸಿಬ್ಬಂದಿಯ ಆ ಎಚ್ಚರಿಕೆಯ ಮಾತುಗಳು ಘಟಕದ ಮೈಕ್‌ನಲ್ಲಿ ಜೋರಾಗಿ ಕೇಳುವುದರಿಂದ ಅವರು ಗಾಬರಿ ಬಿದ್ದು ಓಡುತ್ತಾರೆ' ಎಂದು ಮಾಹಿತಿ ನೀಡಿದರು.

ಯಂತ್ರ ಕದಿಯಲು ಸಾಧ್ಯವಿಲ್ಲ: 'ಎಟಿಎಂ ಯಂತ್ರದ ಒಳಭಾಗದಲ್ಲಿ ಮೂರು ಬಗೆಯ ಸೈರನ್ ಅಳವಡಿಸಲಾಗುತ್ತದೆ. ದುಷ್ಕರ್ಮಿಗಳು ಯಂತ್ರದ ಮೇಲೆ ಬಲವಾಗಿ ಹೊಡೆದರೆ, ಗ್ಯಾಸ್ ಕಟರ್‌ನಿಂದ ಕತ್ತರಿಸಲು ಮುಂದಾದರೆ, ಸುತ್ತಿಗೆಯಿಂದ ಹೊಡೆದರೆ ಸ್ವಯಂ ಚಾಲಿತವಾಗಿ ಸೈರನ್ ಕೂಗಿಕೊಳ್ಳುತ್ತದೆ. ಇದರಿಂದ ಆರೋಪಿ ಕೃತ್ಯವನ್ನು ಸ್ಥಗಿತಗೊಳಿಸುತ್ತಾನೆ. ಕಚೇರಿಯ ಸಿಬ್ಬಂದಿ ಕೂಡಲೇ ಸಂಬಂಧಪಟ್ಟ ಬ್ಯಾಂಕ್‌ನ ಅಧಿಕಾರಿಗಳಿಗೆ ಹಾಗೂ ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಮಾಡಿ ಕಳವು ಯತ್ನ ಸಂಗತಿಯನ್ನು ತಿಳಿಸುತ್ತಾರೆ ಎಂದರು.

ನಂತರ ಮಾತನಾಡಿದ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀನಿವಾಸ್ ಪೊಪುರಿ, 'ದೇಶದಲ್ಲಿ ಅತಿ ಹೆಚ್ಚು ಎಟಿಎಂ ಕೇಂದ್ರಗಳನ್ನು ಹೊಂದಿರುವ ಮಹಾ ನಗರಗಳ ಪಟ್ಟಿಯಲ್ಲಿ ಬೆಂಗಳೂರು ಸಹ ಇದೆ. ಆದರೆ, ಅತ್ಯಧಿಕ ಪ್ರಮಾಣದ ಎಟಿಎಂ ಕಳವು ಪ್ರಕರಣಗಳು ಇಲ್ಲಿಯೇ ನಡೆದಿರುವುದು ದುರಾದೃಷ್ಟಕರ' ಎಂದರು.

'2012ರ ಡಿಸೆಂಬರ್ ತಿಂಗಳಲ್ಲಿ ಆರಂಭವಾದ ಈ ಸಂಸ್ಥೆಯು, ದೇಶದ 1,700 ಎಟಿಎಂ ಘಟಕಗಳಿಗೆ ಹೊಸ ಭದ್ರತಾ ಸಾಧನ ಸೇವೆ ಒದಗಿಸುತ್ತಿದೆ. ಐಸಿಐಸಿಐ, ಆಕ್ಸಿಸ್ ಸೇರಿದಂತೆ ಆರು ಪ್ರತಿಷ್ಠಿತ ಖಾಸಗಿ ಬ್ಯಾಂಕ್‌ಗಳು ನಗರದಲ್ಲಿರುವ ತಮ್ಮ 400 ಎಟಿಎಂ ಘಟಕಗಳ ಭದ್ರತೆಗೆ ಈ ಸಾಧನವನ್ನೇ ಅಳವಡಿಸಿಕೊಂಡಿವೆ' ಎಂದರು.